ಜೂನ್
2024

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

ಮನೆ ಮನೆಗೆ ಗಂಗೆ ಜಲ ಜೀವನ್ ಮಿಷನ್
ಜಲೋತ್ಸವ

# ಸ್ವಚ್ಛತಾವಾಣಿ
ವಾರ್ತಾಪತ್ರ

ಸ್ವಚ್ಛ ಸಂಕೀರ್ಣ
ಒಂದು ಹೆಜ್ಜೆ ಸ್ವಚ್ಛತೆಯ ಕಡೆಗೆ



01

## ಇಲಾಖೆಯ ಸಚಿವರಿಂದ ಅಧಿಕಾರಿಗಳ ನೀರಿನ ಗುಣಮಟ್ಟ ಪರಿಶೀಲನೆ ಸಭೆ

ಶ್ರೀ ಪ್ರಿಯಾಂಕ್ ಖರ್ಗೆ, ಸಚಿವರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಅವರು ಇಂದು ವಿಧಾನ ಸೌಧದಲ್ಲಿ ಕಾರ್ಯಾತ್ಮಕ ಗೃಹನಳ ಸಂಪರ್ಕ, ಬಹುಗ್ರಾಮ ಕುಡಿಯುವ ನೀರು ಯೋಜನೆಯ ನೀರಿನ ಗುಣಮಟ್ಟ ಕುರಿತಾಗಿ SE, EE ಗಳ ಜೊತೆ ಸಭೆ ನಡೆಸಿದರು.

ಶ್ರೀ ಅಂಜುಮ್ ಪರ್ವೇಜ್, ಅಪರ ಮುಖ್ಯ ಕಾರ್ಯದರ್ಶಿ RDPR, ಶ್ರೀ ನಾಗೇಂದ್ರ ಪ್ರಸಾದ್ ಕೆ ನಿರ್ದೇಶಕರು, RDWSD, ಶ್ರೀ ಎಜಾಜ್ ಹುಸೇನ್ CE, RDWSD ಹಾಗೂ ಇಲಾಖೆಯ ಹಿರಿಯ ಅಧಿಕಾರಿಗಳು ವೇಳೆ ಉಪಸ್ಥಿತರಿದ್ದರು.

02

## ಗ್ರಾ.ಕು.ನೀ & ನೈ ಇಲಾಖೆಗೆ ಹೊಸದಾಗಿ ಆಯ್ಕೆಯಾದ ಸಹಾಯಕ ಅಭಿಯಂತರರು ಹಾಗೂ ಕಿರಿಯ ಅಭಿಯಂತರರುಗಳಿಗೆ ಸಚಿವರಿಂದ ನೇಮಕಾತಿ ಪತ್ರ ವಿತರಣೆ



ಶ್ರೀ ಪ್ರಿಯಾಂಕ್ ಖರ್ಗೆ, ಸಚಿವರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಅವರು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಗೆ ಹೊಸದಾಗಿ ಆಯ್ಕೆಯಾದ ಸಹಾಯಕ ಅಭಿಯಂತರರು ಹಾಗೂ ಕಿರಿಯ ಅಭಿಯಂತರರುಗಳಿಗೆ ಇಂದು ಅಂಬೇಡ್ಕರ್ ಭವನದಲ್ಲಿ ನಡೆದ ಪುನಶ್ಚೇತನ ಕಾರ್ಯಕ್ರಮದಲ್ಲಿ ನೇಮಕಾತಿ ಪತ್ರ ನೀಡಿದರು.

ಶ್ರೀ ಅಂಜುಮ್ ಪರ್ವೇಜ್, ಅಪರ ಮುಖ್ಯ ಕಾರ್ಯದರ್ಶಿ RDPR, ಶ್ರೀ ನಾಗೇಂದ್ರ ಪ್ರಸಾದ್ ಕೆ ನಿರ್ದೇಶಕರು, RDWSD, ಶ್ರೀ ಎಜಾಜ್ ಹುಸೇನ್ CE, RDWSD, ಪಾರ್ವತಿ ಹೆಚ್.ಬಿ CAO, RDWSD, ಶ್ರೀ ಜಾಫರ್ ಶರೀಫ್ ಸುತಾರ, ಉಪಕಾರ್ಯದರ್ಶಿ (ಆಡಳಿತ) RDWSD ಹಾಗೂ ಇಲಾಖೆಯ ಹಿರಿಯ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು



03

## ಇಲಾಖೆಯ ಮುಖ್ಯ ಅಭಿಯಂತರಿಂದ ಹಾಸನ ಜಿಲ್ಲೆ ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಸ್ಥಳಕ್ಕೆ ಭೇಟಿ

ಇದೇ ತಿಂಗಳು ದಿನಾಂಕ 6 ರಂದು ಶ್ರೀ ಎಜಾಜ್ ಹುಸೇನ್ ಮುಖ್ಯ ಅಭಿಯಂತರರು, #RDWSD ಇವರು ಸಿಇಓ ಅವರೊಂದಿಗೆ ಹೊಳೆ ನರಸೀಪುರ, ಅರಕಲಗೂಡು, ಚನ್ನಪಟ್ಟಣ ತಾಲ್ಲೂಕುಗಳಿಗೆ ಭೇಟಿ ನೀಡಿ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳ ನೀಲನಕ್ಷೆ ಮತ್ತು ಕಾಮಗಾರಿಗಳನ್ನು ಪರಿಶೀಲಿಸಿದರು. ಈ ವೇಳೆ ಜಿ.ಪಂ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

04

## ಇಲಾಖೆಯ ಉಪ ಕಾರ್ಯದರ್ಶಿ (ಅಭಿವೃದ್ಧಿ) ಅವರಿಂದ ಕೋಲಾರ ಜಿಲ್ಲೆ ಭೇಟಿ



ಶ್ರೀ ಎಸ್.ಸಿ.ಮಹೇಶ್, ಉಪ ಕಾರ್ಯದರ್ಶಿ (ಅಭಿವೃದ್ಧಿ) #RDWSD ಇವರು ಇಂದು ಕೋಲಾರ ಜಿಲ್ಲೆಗೆ ಭೇಟಿ #SBM-G ಯೋಜನೆಯ ವಿವಿಧ ಕಾಮಗಾರಿಗಳನ್ನು ವೀಕ್ಷಿಸಿದರು. ಆ ನಂತರ ಜಿ.ಪಂ ಕಚೇರಿಯಲ್ಲಿ ಎಸ್.ಬಿ.ಎಂ (ಜಿ) ಯೋಜನೆಯ ಪ್ರಗತಿ ಪರಿಶೀಲನಾ ಸಭೆ ನಡೆಸಿದರು. ಜಿ.ಪಂ, ತಾ.ಪಂ ಹಿರಿಯ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು.